ರಸ್ತೆಯಲ್ಲಿದೆ. ಬಿರುಸಿನ ಬಿರುಗಾಳಿಯ ಕೋಣ ಇತ್ತ ಇತ್ತಲೇ ಬಂದುದು ಸುಮ್ಮನೆ ಹೋಗುವುದೆ? ಮಗುವ ಅಂಗಿಯಲಿ ಹಾಯುವಂತೆ ಕೊಂಬು ತೂರಿಸಿತು. ಅದರ ಹಿಂದಿನ ಜನರಿಂದ ಮತ್ತಷ್ಟು ಜೋರಲಿ ಹಾ... ಹೋ... ದಿಗಿಲು ಚೀರಾಟ ಕೇಳಿಸಿತು. ಸದ್ಯ ಮಗುವಿನ ಅಂಗಿಯ ಕಾಜುಗುಂಡಿಗಳ ಗಟ್ಟಿ ಹೊಲಿದಿರಲಿಲ್ಲ. ಕೊಂಬಿನಲಿ ಸಿಕ್ಕಿಸಿಕೊಂಡು ಮೇಲೆತ್ತಿ ಎಸೆಯ ನೋಡಿತು. ಅಂಗಿ ಕಿತ್ತು ಮಗುವ ಅತ್ತೊಗೆದು ಇತ್ತೋಡಿತು ಕೋಣ.

ಮಗುವಿನ ತಾಯಿ ಬಾಗವ್ವ ಅರಬಡಿಸಿ ಒಡಗ್ಗನೆ ಬಂದಳು. ಮಗುವ ಎದೆಗವಚಿ ಹಿಡಿಗೂ ಚಿಕ್ಕವಳಾಗಿ ಮಿಡುಕಿ ಮಮ್ಮಲ ಮರುಗಿ ಮೊರೆದಳು.

"ಅಯ್ಯಯ್ಯೊ ನನಕಂದ ನನ ಬಂಗಾರ. ಏನಾತಪ ನನಕಂದಗೆ? ಹಾಳು ಕೋಣಗೆ ನನ ಕಂದನೆ ಬೇಕಿತ್ತಾ? ಇಂಥ ಕೋಣದ ಆ ಮಾರಮ್ಮನ ಗುಡಿಗೆ ಮುಳ್ಳುಬಡಿಯ" ಶಪಿಸಿದಳು ಎಡಬಿಡದೆ, ನಿಲ್ಲದ ರೈಲಂತೆ. ಗಾಬರಿ ದಿಗಿಲಿಗೆ ಮಗುವಿನ ಗ್ಯಾನ ತಪ್ಪಿತ್ತು. ಸತ್ತೇ ಹೋಗಿದೆಯೆಂದು ಮತ್ತೂ ಗಾಬರಿಯದಳು ಬಾಗವ್ವ. ನೀರು ಚಿಮುಕಿಸಿ ಗಾಳಿ ಬೀಸಿದರೂ ಅದು ಕಣ್ಣು ತೆರೆಯಲಿಲ್ಲ. ಎದೆಗವಚಿ ಅಸ್ಪತ್ರೆಗಾಗಿ ಊರಲ್ಲಿಯ ಆಟೊ ಕರೆದು ಹತ್ತಿದರು. ಮುಸು ಮುಸುನೆ ಅಳುವಂತೆ ಗೊಣಗುತ ಗಂಡಸರು ಆಟೊ ತುಂಬಿಕೊಂಡರು.

"ಅರೆ ಇಸ್ಕಿ. ಇದು ನಮ್ದು ಊರದ್ದು ಕೋಣ ಇದ್ದಂಗೆ ಐತೆ. ಇಸ್ಕಿ ಮಾಕಿ, ಇದು ಇಲ್ಲಿಗೆ ಹೆಂಗೆ ಬಂತು? ನಮ್ದು ಊರದ್ದು ಜನಕ್ಕೆ ಬುದ್ಧಿಯಿಲ್ಲ, ಖರಾಬು. ಅಲ್ಲೇ ತಲಾಶ್ ಮಾಡ್ತವರೆ, ಇದು ಇಲ್ಲಿ ಐತೆ ಐನಾತೀದು.''

ಊರೂರು ಸುತ್ತಿ ಕುರಿ ಮೇಕೆ ಚಮಡ ಕೊಳ್ಳಾಕೆ ಬಂದ ಹಾರುವಳ್ಳಿ ಬುಡೇನಿ ತನ್ನೊಳಗೆ ತಾನೆ ಮಾತಾಡಿಕೊಂಡ: 'ಈ ಕೋಣ ದನದ್ದು ಆಗಿದ್ದೇ ಆಗಿದ್ರೆ ನೂರು ಕೆಜಿ ಮಟನ್ ಗ್ಯಾರಂಟಿ ಇರೋದು, ಗರಿ ಗರಿ ರೂಪಾಯಿ ಜೇಬು ತುಂಬೋದು.' 'ಅರೆ ಸಾಬಿ ಮೈಮ್ಯಾಗೆ ಗ್ಯಾನ ಇಲ್ಲವಾ? ಇದು ದೇವದುರ್ಗ, ಮಾರಮ್ಮಂದು ಕೋಣ. ಹಂಗೆಲ್ಲಾ ಮಾರೋದು ಕೊಳ್ಳೋದು ನಕ್ಕೊ. ಇದು ದುಕಾನ್‌ದು ಸಾಮಾನು ಅಲ್ಲ. ಜನ ಸುಮ್ಮಕೆ ಬಿಟ್ಟಾರ? ಬಡವ ನೀ ಮಡಗಿದ್ದಂಗೆ ಇರು ಅಂತಾರಲ್ಲಾ ಹಂಗೆ, ಬಾಯಿ ಮುಚ್ಚಿಕೊಂಡು ಸುಮ್ಮನೆ ನಿನ್ನದಾರಿ ನೀ ನೋಡು, ಇದೆಲ್ಲಾ ಚೋಡ್ದೊ' ತಾನೇ ಅಂದುಕೊಂಡು ತಲೆಯ ಬಿಳಿ ಟೋಪಿ ಸರಿಸಿಕೊಳ್ಳುತ್ತ ಮತ್ತೊಂದು ಓಣಿಗೆ ತಿರುಗಿದ.

ದಿನ ಮಧ್ಯಾಹ್ನಕು ಮಗು ಕಣ್ಣು ಬಿಡಲಿಲ್ಲ. ಕಣ್ಣು ತೆರೆದುದು ಸಂಜೆ. ಗದ್ದ, ಮೊಣಕೈಯಿಯಲಿ ಗಾಯ. ಅದುಕು ಮೀರಿದುದು ದಿಗಿಲುಗಾಯ. ಬೆದರಿ ಬೆಚ್ಚಿದಗಾಯ, ತಾಯಿಯ ಮಿಡುಕಾಟ ಮಾಯುವುದೆಂತೊ...

★★★

ಹಾರುವಳ್ಳಿಯ ಹಿರಿಯರು, ಯಜಮಾನರು, ಪಡ್ಡೆಹುಡುಗರು, ಪ್ಯಾಂಟು ಇಜಾರದ ಹುಡುಗರು ಮಾರಳ್ಳಿಗೆ ಗುಂಪೊತ್ತು ಬಂದರು. ಊರ ಹಿರಿಯರಿಗೆ ಅರಿಕೆ ಇಟ್ಟರು.

"ನಮ್ಮೂರ ಕೋಣ ಇದು. ಊರ ಮಾರಿಗೆ ಬಿಟ್ಟಕೋಣ. ಬಿಟ್ಟು ಐದು ವರ್ಷ ಆಯ್ತು. ಈ ವರ್ಷ ಮಾರಿಹಬ್ಬ. ಅಮ್ಮಗೆ ಬಿಟ್ಟಕೋಣ ಇಲ್ಲದೆ ಹಬ್ಬ ಮಾಡೋದೆಂಗೆ? ಅದೆಂಗೋ ಇಲ್ಲಿಗೆ ಬಂದೈತೊ. ನಮ್ಮ ಊರ ಕ್ವಾಣವ ನಮಿಗೆ ಕೊಡರಿ."

ಮಾರಳ್ಳಿಯವರು ಹಿರಿಯರು ಎಲ್ಲರು ಒಡಗೂಡಿ ಕಲೆತು, ಒಳಗೆ ಅಳೆದು ಸುರಿದು ಒಳಿತು ಕೆಡಕುಗಳ ಪದರ ಬಿಡಿಸಿ ಆಗುಹೋಗುಗಳ ಕುಡುಗೋಲು ಆಡಿಸಿದರು.

"ಈ ಕೋಣ ನಮ್ಮೂರದ್ದು ಏನಲ್ಲ. ನಮ್ಮೂರು ಸಿದ್ಧರ ಊರು. ಇಲ್ಲಿ ಬಲಿಗಿಲಿ ನಡಾವಳಿ ಇಲ್ಲ. ಈ ಕೋಣ ಇಲ್ಲಿಗೆ ಬಂದು ಹಾಳುಮಾಡಿ ನರಳಿಸಿದ್ದೇ ಸಾಕು ಸಾಕಾಗಿದೆ. ಬಡವಿ ದುರಗವ್ವಂದು